ಮೂಲ ದಾವಾ ಸಂಖ್ಯೆ 45/2016 ಪಿ ಡಬ್ಲ್ಯೂ 1

(ದಿನಾಂಕ 18-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ಈ ದಾವೆಯನ್ನು ನಾನು ಪ್ರತಿವಾದಿ ವಿಜಯಕುಮಾರ್ ಮೇಲೆ ದಾಖಲಿಸಿದ್ದೇನೆ. ಆಸ್ತಿಯನ್ನು ನಾನು ಖರೀದಿಸಿದ್ದೇನೆ ಪಹಣಿ ನನ್ನ ಹೆಸರಿನಲ್ಲಿ ಇಲ್ಲ ಆದ್ದರಿಂದ ಪ್ರತಿವಾದಿಯ ಮೇಲೆ ದಾವೆಯನ್ನು ದಾಖಲಿಸಿದ್ದೇನೆ. ನಾನು ದಾವಾಸ್ತಿಯನ್ನು ಕೋಬಜ್ಜಿ ಓಬಪ್ಪರವರಿಂದ ಸನ್ 1971 ರಲ್ಲಿ ನಾನು ಖರೀದಿಸಿದ್ದೇನೆ. ದಾವಾಸ್ತಿಯನ್ನು ಖರೀದಿಸುವ ಸಮಯದಲ್ಲಿ ನೀವು ಯಾವ ದಾಖಲೆಗಳನ್ನು ನೋಡಿ ಖರೀದಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಶಾಲೆ ಕಲಿತಿಲ್ಲ ಆದ್ದರಿಂದ ಹೇಳಲು ಬರುವುದಿಲ್ಲ. ದಾವಾ ಜಮೀನು ಸರ್ವೆ ನಂ. ಒಟ್ಟು 14 ಎಕರೆ 40 ಸೆಂಟ್ಸ ಇತ್ತು. ಅದು ಪಹಣಿ ಯಾರ ಹೆಸರಿನಲ್ಲಿತ್ತು ಅನ್ನೋದು ನನಗೆ ಗೊತ್ತಿಲ್ಲ. ನಾನು ಓಬಪ್ಪರವರಿಂದ ಖರೀದಿಸಿದ್ದೇನೆ. ಸದರಿ ಆಸ್ತಿ ಓಬಪ್ಪನವರಿಗೆ ಹೇಗೆ ಬಂದಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಓಬಪ್ಪನ ಹೆಸರಿನಲ್ಲಿ ಸದರಿ ಆಸ್ತಿಯ ಪಹಣಿ ಇತ್ತಾ ಎನ್ನುವುದರ ಬಗ್ಗೆ ನನಗೆ ಗೊತ್ತಿಲ್ಲ. ಸನ್ 1968 ರಿಂದ ಜಮೀನುಗಳ ಪಹಣಿ ಬಂದಿರುತ್ತವೆಂದರೆ ಸರಿ. ಸನ್ 1968 ರಿಂದ 1992-93 ನೇ ಸಾಲಿನವರೆಗೆ ಮೇಲ್ಕಂಡ ಜಮೀನಿನ ಪಹಣಿ ಬೆಳಗಿ ಚನ್ನಬಸಮ್ಮ ಇವರ ಹೆಸರಿಗೆ ಇತ್ತು ಎಂದರೆ ಇರಬಹುದು. ಚನ್ನಬಸಮ್ಮನ ಮೊಮ್ಮಗ ಪ್ರಭಾಕರ ನನಗೆ ಗೊತ್ತು. ಚನ್ನಬಸಮ್ಮ ಇವರಿಂದ ಪ್ರಭಾಕರ ಇವರ ಹೆಸರಿಗೆ ದಿಃ 08-04-1993 ರಂದು ಎಂ ಆರ್ ನಂ. 36/1992-93 ರಂತೆ ದಾಖಲಾಗಿದೆ ಎಂದರೆ ಇರಬಹುದು. ಸನ್ 2012-13 ರವರೆಗೆ ಸದರಿ ಜಮೀನಿನ ಪಹಣಿ ಪ್ರಭಾಕರ ಇವರ ಹೆಸರಿಗೆ ಬರುತ್ತದೆಂದರೆ ಸರಿ. ಪ್ರಭಾಕರ ಇವರಿಂದ ಪ್ರತಿವಾದಿಯ ಹೆಸರಿಗೆ ಎಂ ಆರ್ ನಂ.ಹೆಚ್39/2013-14 ರಂತೆ ಪಾಲುವಿಭಾಗದ ಪ್ರಕಾರ ಸದರಿ ಜಮೀನು ಬಂದಿರುತ್ತದೆಂದರೆ ಇರಬಹುದು. ಸನ್ 2013-14 ರಿಂದ ಸನ್ 2019 ರವರೆಗೆ ದಾವಾ ಜಮೀನಿನ ಒಟ್ಟು ಕ್ಷೇತ್ರ 13.44 ಎಕರೆ ಜಮೀನಿಗೆ ಪ್ರತಿವಾದಿಯ ಹೆಸರು ದಾಖಲಾಗಿದೆ ಎಂದರೆ ಇರಬಹುದು. ನಂತರದಲ್ಲಿ ಸನ್ 2019 ರಲ್ಲಿ ಪ್ರತಿವಾದಿ ಮತ್ತು ಅವನ ಸಹೋದರರು ಪಾಲುವಿಭಾಗ ಮಾಡಿಕೊಂಡಿದ್ದು ದಾವಾ ಜಮೀನು ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆಂದರೆ ಇರಬಹುದು, ಸಾಕ್ಷಿ ಮುಂದುವರೆದು ನಾನು ಖರೀದಿಗೆ ಪಡೆದಿದ್ದೇನೆ ಮತ್ತು ನನ್ನ ಹೆಸರಿನಲ್ಲಿ ಖರೀದಿ ಪತ್ರ ಇದೆ ಎಂದು ಹೇಳುತ್ತಾರೆ. ದಾವಾಸ್ತಿಯು ಮೂಲತಃ ಇದು ಯಾರು ಎಂದು ನನಗೆ ಗೊತ್ತಿಲ್ಲ. ದಾವಾಸ್ತಿ ಮೂಲತಃ ಬೆಳಗಿ ಚನ್ನಬಸಮ್ಮ ಇವರ ಹೆಸರಿಗೆ ಬಂದಿರುತ್ತದೆಂದರೆ ಇರಬಹುದು. ಮೇಲ್ಕಂಡ ರೀತಿಯಲ್ಲಿ ಖಾತಾ

ಬದಲಾವಣೆಯಾದ ಬಗ್ಗೆ ನಿವೇನಾದರೂ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಇಲ್ಲ, ಸಾಕ್ಷಿ ಮುಂದುವರೆದು ದಾವೆ ಸಲ್ಲಿಸಿದ್ದೇನೆಂದು ನುಡಿಯುತ್ತಾರೆ. ನೀವು ಮೇಲ್ಕಂಡ ಖಾತೆ ಬದಲಾವಣೆ ಕುರಿತು ತಕರಾರೇನಾದರೂ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲವೆನ್ನುತ್ತಾರೆ. ದಾವಾಸ್ತಿ ವಾಮದೇವ್ ಹೆಸರಿಗೆ ಇರಲಿಲ್ಲವಾದ್ದರಿಂದ ಅವರಿಗೆ ದಾವಾಸ್ತಿಯನ್ನು ನನಗೆ ಮಾರಾಟ ಮಾಡಲು ಬರುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯನ್ನು ನಾನು ವಾಮದೇವ್ ಇವರಿಂದ ಖರೀದಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾಮದೇವ್ ಹೆಸರಿನಲ್ಲಿ ದಾವಾ ಜಮೀನಿನ ಪಹಣಿ ಇರಲಿಲ್ಲ ಮತ್ತು ಅವನ ಹೆಸರಿನಲ್ಲಿ ಖಾತೆ ಇರಲಿಲ್ಲವಾದ್ದರಿಂದ ನಾನು ದಾವಾ ಜಮೀನನ್ನು ವಾಮದೇವ್ ಇವರಿಂದ ಖರೀದಿಸುತ್ತೇನಂತಾ ಸುಳ್ಳು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ವಾಮದೇವ್ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲವೆಂದರೆ ಸರಿಯಲ್ಲ.

ಕೋಬಜ್ಜಿ ವಾಮದೇವಪ್ಪ ಇವರಿಗೆ ೩ ಜನ ಮಕ್ಕಳು. ಅವರಲ್ಲಿ ಒಬ್ಬರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತಾರೆ. ವಾಮದೇವ್ ಇವರ ಮಗ ಈ ದಾವೆಯಲ್ಲಿ ಸಾಕ್ಷಿ ನುಡಿದಿರುತ್ತಾರಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕೋಬಜ್ಜಿ ವಾಮದೇವ್ ಇವರಿಗೆ ನೀಲಮ್ಮ ಅಂತಾ ಹೆಂಡತಿ ಇದ್ದರು ಎಂದರೆ ಸರಿ. ಅವರಿಗೆ ೭ ಜನ ಮಕ್ಕಳು ಎಂದರೆ ಸಾಕ್ಷಿಯು ಅವರ ಗಂಡುಮಕ್ಕಳು ಮಾತ್ರ ನನಗೆ ಗೊತ್ತು ಹೆಣ್ಣುಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲವೆನ್ನುತ್ತಾರೆ. ಅವರಿಗೆ ೩ ಜನ ಗಂಡು ಮಕ್ಕಳು ಅವರೆಂದರೆ ಮುದಿಯಪ್ಪ, ಕೊಟ್ರೇಶಪ್ಪ ಮತ್ತು ಇನ್ನೊಬ್ಬರ ಹೆಸರು ಬಸವರಾಜಪ್ಪ ಇರಬಹುದು. ಅವರಿಗೆ ಲಲಿತವ್ವ, ಮುದಿಯಪ್ಪ, ಕೊಟ್ರೇಶಪ್ಪ, ಗುರುಬಸವರಾಜ, ಚನ್ನಬಸಪ್ಪ, ರತ್ನಮ್ಮ, ಕೊಟ್ರಮ್ಮ ಎಂದರೆ ಇರಬಹುದು ಸಾಕ್ಷಿ ಮುಂದುವರೆದು ಗಂಡುಮಕ್ಕಳು ಮಾತ್ರ ಗೊತ್ತು ಎನ್ನುತ್ತಾರೆ. ನೀವು ಯಾವತ್ತಾದರೂ ಸದರಿಯವರನ್ನು ಭೇಟಿಯಾಗಿ ದಾವಾ ಜಮೀನಿನ ಪಹಣಿಯನ್ನು ನಮ್ಮ ಹೆಸರಿಗೆ ಮಾಡಿಕೊಡಿ ಅಂತಾ ಕೇಳಿಕೊಂಡ್ರಾ ಎಂದರೆ ಸಾಕ್ಷಿಯು ನಾನು ಕೇಳಿದೆ ಅವರು ನನಗೆ ನಿಮ್ಮ ಹೆಸರಿಗೆ ಪಹಣಿ ಮಾಡಿಕೊಳ್ಳಿ ನಮ್ಮದು ತಕರಾರಿಲ್ಲ ಅಂತಾ ಹೇಳಿ ಹೋಗಿರುತ್ತಾರೆನ್ನುತ್ತಾರೆ. ನೀವು ಆ ರೀತಿ ಅವರಿಗೆ ಕೇಳಿರುವುದಿಲ್ಲ ಅವರ ಹೆಸರಿಗೆ ದಾಖಲೆ ಇರುವುದಿಲ್ಲ ಅವರು ಆ ರೀತಿ ಹೇಳಲು ಬರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸನ್ 1968 ರಿಂದ ದಾವಾ ಸರ್ವೆ ನಂಬರಿನ ಒಟ್ಟು ಕ್ಷೇತ್ರ 13.14 ಎಕರೆ ಜಮೀನಿನಲ್ಲಿ ಪ್ರತಿವಾದಿ ಮತ್ತು ಅವರ ವಂಶಸ್ಥರು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಸನ್ 1971 ರಿಂದ ನಾನು ಸ್ವಾಧೀನದಲ್ಲಿರುತ್ತೇನೆ ಎನ್ನುತ್ತಾರೆ. ದಾವಾಸ್ತಿಯನ್ನು ನಾನೇ ಸ್ವಾಧೀನದಲ್ಲಿರುತ್ತೇನಂತಾ ತೋರಿಸಲು ನೀವೇನಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ.

ವಾದಪತ್ರದಲ್ಲಿ ಏನು ಬರೆದಿರುತ್ತಾರೆನ್ನುವುದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ನಾನು ಓದಲಿಲ್ಲ ನನಗೆ ಗೊತ್ತಿಲ್ಲವೆನ್ನುತ್ತಾರೆ. ನಿಮ್ಮ ಸಾಕ್ಷಿ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ನಾನು ಅನಕ್ಷರಸ್ಥನಾಗಿರುವುದರಿಂದ ನನಗೆ ಗೊತ್ತಿಲ್ಲವೆನ್ನುತ್ತಾರೆ. ದಾವೆಯನ್ನು ದಾಖಲಿಸಲು ನನಗೆ ಯಾವುದೇ ಹಕ್ಕು ಇಲ್ಲ, ನನ್ನ ಹೆಸರಿನಲ್ಲಿ ಯಾವುದೇ ಪಹಣಿ ಇಲ್ಲವೆಂದರೆ ಸರಿಯಲ್ಲ. ಯಾವ ದಿನಾಂಕದಂದು ನೀವು ದಾವಾಸ್ತಿಯನ್ನು ಖರೀದಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಸನ್ 1971 ರಲ್ಲಿ ಖರೀದಿಸಿದ್ದೇನೆ ಎನ್ನುತ್ತಾರೆ. ಆ ಖರೀದಿ ಪತ್ರಕ್ಕೆ ಸಾಕ್ಷಿದಾರರು ಮತ್ತು ಬಿಕ್ಕಲಂದಾರ ಅಂತಾ ಯಾರು ಸಹಿ ಮಾಡಿರುತ್ತಾರೆ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಅವರಿಬ್ಬರು ಸತ್ತಿರುತ್ತಾರೆನ್ನುತ್ತಾರೆ. ಆ ಖರೀದಿ ಪತ್ರವನ್ನು ಯಾರು ಬರೆದರು ಅಂತಾ ನನಗೆ ಹೇಳಲು ಬರುವುದಿಲ್ಲ. ದಾವಾಸ್ತಿ ಸಂಪೂರ್ಣವಾಗಿ ಪ್ರತಿವಾದಿ ಮತ್ತು ಅವರ ವಂಶದವರಿಗೆ ಪಿತ್ರಾರ್ಜಿತವಾಗಿ ಜಂಟಿ ಕುಟುಂಬದಿಂದ ಬಂದ ಆಸ್ತಿಯಾಗಿದ್ದು ಅದಕ್ಕೆ ಪ್ರತಿವಾದಿಯು ಸಂಪೂರ್ಣ ಮಾಲೀಕರಾಗಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ದಾವಾಸ್ತಿಯಲ್ಲಿ ಪ್ರತಿವಾದಿಯೇ ಸ್ವಾಧಿಪೇನದಲ್ಲಿರುತ್ತಾರೆಂದರೆ ಸಾಕ್ಷಿಯು ಪತ್ರದಲ್ಲಿ ಇರಬಹುದು ಆದರೆ ನಾನೇ ಸ್ವಾಧೀನದಲ್ಲಿರುತ್ತೆನೆ ಎನ್ನುತ್ತಾರೆ. ಪ್ರತಿವಾದಿಯು ದಾವಾಸ್ತಿಯ ಸ್ವಾಧೀನದಲ್ಲಿರುವುದರಿಂದ ದಿನಾಂಕಃ10-02-2016 ಮತ್ತು 13-02-2016 ರಂದು ಪ್ರತಿವಾದಿಯು ದಾವಾಸ್ತಿಯಲ್ಲಿ ಅತಿಕ್ರಮಣ ಮಾಡುವ ಪ್ರಶ್ನೆಯೇ ಬರುವುದಿಲ್ಲವೆಂದರೆ ಸರಿಯಲ್ಲ. ದಾವೆಗೆ ಅನುಕೂಲವಾಗಲು ನಾನು ಈ ರೀತಿ ಸುಳ್ಳು ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ.

ದಾವಾ ಜಮೀನು ಸರ್ವೆ ನಂಬರ್ ಒಟ್ಟು 13.44 ಸೆಂಟ್ಸ ಜಮೀನಿನ ಚಕ್ಕುಬಂದಿ ನಿಮಗೆ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ನಾನು ಖರೀದಿಸಿದ ದಾವಾ ಜಮೀನಿನ ಚಕ್ಕುಬಂದಿ ಮಾತ್ರ ಹೇಳಬಲ್ಲೆ ಎನ್ನುತ್ತಾರೆ. ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆಯನ್ನು ದಾಖಲಿಸಿ ಅದಕ್ಕನುಗುಣವಾಗಿ

ಮೂಲ ದಾವಾ ಸಂಖ್ಯೆ 45/2016 ಪಿ ಡಬ್ಲ್ಯೂ 1

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವಂತಹ ಪರಿಹಾರ ಪಡೆಯಲು ನನಗೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ಈ ದಾವೆಯಲ್ಲಿ ಅವಶ್ಯಕ ಪಕ್ಷಕಾರರನ್ನು ಸೇರಿಸಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯ ಸಂಪೂರ್ಣ ಸ್ವಾಧೀನ ಮತ್ತು ಮಾಲೀಕತ್ವ ಪ್ರತಿವಾದಿಯದ್ದೇ ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ